ನೀನಾ ಚೌಧರಿಯೆಂಬ ಆ ಹುಡುಗಿ ಗ್ವಾಲಿಯರ್ ಘರಾಣ ಎಂಬ ಮೈಸೂರಿನಲ್ಲಿದ್ದ ಕಲಾಶಾಲೆಗೆ ಸೇರ್ಪಡೆಯಾಗಿ ಹತ್ತಿರ ಹತ್ತಿರ ಒಂದು ವರ್ಷವಾಗಿತ್ತು. ಹತ್ತಿರ ಹತ್ತಿರವೇನು? ನಿಖರವಾಗಿ ಈ ತೀಳ್‌ಗುಲ್ಯಾಗೆ ಒಂದು ವರ್ಷ ಎಂದುಕೊಂಡರು ಗಾಯಕವಾಡರು. ಈ ಕನ್ನಡದ ಜನ ಗೋಡ್ಗೋಡ್ ಭೋಲೆಗೆ ಸಂಕ್ರಾಂತಿಯೆಂದು ಕರೆಯುತ್ತಾರೆ ಎಂದು ನಗುಬಂತು. ತನ್ನ ಮಡಿದ ಹೆಂಡತಿಯೂ ಕನ್ನಡತಿಯೆ. ಅವಳೂ ಈ ಹಬ್ಬವನ್ನು ಎಳ್ಳುಬೆಲ್ಲ ಹಂಚಿ ಆಚರಿಸುತ್ತಿದ್ದಳು. ನಮ್ಮ ಕಡೆಯಂತೆ ಬಿಳಿ ಎಳ್ಳುಂಡೆ ಮಾಡುವ ವಾಡಿಕೆ ಇಲ್ಲಿಲ್ಲ. ತನ್ನ ಪತ್ನಿ ಪಾರ್ವತಿ ಎಂದೂ ಸೇರಿದ ಮನೆಯ ಸಂಪ್ರದಾಯಗಳನ್ನು ಪಾಲಿಸಲೇ ಇಲ್ಲ ಎನಿಸಿದಾಗ ಒಂದು ಪುಟ್ಟ ನಿರಾಶೆಯ ಉಸಿರೊಂದು ಹೊರಬಿತ್ತು. ಅವಳು ತನ್ನ ಮಡದಿಯಾದ್ದಾಗ್ಯೂ ಒಂದಿಷ್ಟೂ ಸಂಗೀತದ ಗಾಳಿಗಂಧವಿಲ್ಲದ ಅರಸಿಕಳು; ತಾನೇನು... ತನ್ನ ವಂಶದ ಘನತೆಯೇನು? ರಘುನಾಥ್ ಗಾಯಕವಾಡರ ವಂಶಸ್ಥರೆಂದರೆ ಸಾಧಾರಣವೆ... ತನ್ನ ತಾತ, ತಂದೆ ಕಡೆಗೆ ತಾಯಿಯೂ ಒಳ್ಳೆಯ ಖ್ಯಾಲ್ ಗಾಯಕರು. ತಾನು ಮದುವೆಯಾಗುವ ಕಾಲಕ್ಕೆ ತಮ್ಮ ಘರಾಣದ ಕೀರ್ತಿ ಏರುಗತಿಯಲ್ಲಿತ್ತು. ಅದೆಷ್ಟೆಷ್ಟೋ ಕಡೆ ತನ್ನ ಕಛೇರಿಗಳು ನಡೆದು ತಾನೂ ಪ್ರಸಿದ್ಧನಾಗಿದ್ದೆ. ಆದರೆ... ಮೈಸೂರಿನ ಕಛೇರಿಗೆಂದು ಬಂದಿದ್ದಾಗ ಅವರ ಮನೆಯಲ್ಲಿ ಇಳಕೊಂಡಿದ್ದೇ ನೆಪ. ಇದೇ ವಿಶಾಲ ಮನೆ. ಆಗ ಹೀಗಿರಲಿಲ್ಲ. ತನ್ನನ್ನು ವಿಶೇಷವಾಗಿ ಉಪಚರಿಸಿ ಬಂಗಲೆ ಹಿಂಬದಿಯ ಸುಸಜ್ಜಿತ ಔಟ್‌ಹೌಸನ್ನೇ ಬಿಟ್ಟುಕೊಟ್ಟಿದ್ದರು. ಊಟೋಪಚಾರಗಳೂ ಇದೇ ಮನೆಯಲ್ಲಿ. ಶಿವಶಂಕರನ್ ಅಯ್ಯರ್... ಅವಳ ತಂದೆ ತುಂಬಾ ಮುತುವರ್ಜಿಯಿಂದ ನೋಡಿಕೊಂಡಿದ್ದರು. ಅಪರೂಪದ ಚೆಲುವೆ ಅವರ ಮಗಳು ಪಾರ್ವತಿ. ಚಿಗರೆಯಂತೆ ಸುಳಿದಾಡುತ್ತಿದ್ದವಳ ಮೋಹಪಾಶಕ್ಕೆ ಸಿಲುಕಿ ತತ್ತರಿಸಿ ಹೋಗಿದ್ದೆನಲ್ಲ! ಛೇ! ಇಲ್ಲದಿದ್ದರೆ ಯಾರಾದರೂ ಗಾಯಕಿ ತನ್ನ ಹೆಂಡತಿಯಾಗಬೇಕಿತ್ತು. ಇವಳು ತನ್ನ ಹಣೆಯಲ್ಲಿ ಬರೆದಿರಬೇಕಾದರೆ ಯಾರೇನು ಮಾಡಲಾದೀತು? ಅಂದಚೆಂದ ರೂಪು ಲಾವಣ್ಯದ ನಶೆಯೆಲ್ಲ ಯೌವನದೊಂದಿಗೆ ಇಳಿದು ಹೋಗುತ್ತದೆ. ಅದು ಅರ್ಥವಾಗುವಷ್ಟರಲ್ಲಿ ಸಾರಂಗ್ ಹುಟ್ಟಿಬಿಟ್ಟಿದ್ದ. ಬದುಕಿನಲ್ಲಿ ಬಹುದೂರ ಬಂದಾಗಿತ್ತು. ಇಷ್ಟಕ್ಕೂ ತಾನೇನು ಅವಳೊಬ್ಬಳೊಂದಿಗೆ ಮಾತ್ರ... ಅದೆಷ್ಟು ಹೆಣ್ಣುಗಳು ತನ್ನ ಗಾನಕ್ಕೆ ಪರವಶರಾಗಿ ತಾವುತಾವಾಗಿ ಒಪ್ಪಿಸಿಕೊಂಡಿಲ್ಲ. ತನ್ನ ಕಣ್ಸನ್ನೆಯರಿತು ಸುಖ ಸುರಿದಿಲ್ಲ... ಆದರೂ... ಅವರ್‍ಯಾರೂ ತನ್ನ ಹೆಂಡಿರಾಗಲು

